

'ನಾಗರಹಾವು' ಚಿತ್ರದಲ್ಲಿ ವಿಷ್ಣುವರ್ಧನ್, ಆರತಿ

ಸಾರುವ ಪ್ರಧಾನ ಕಳ್ಳಿನರಸಪ್ಪನನ್ನು ಮಹಾ ಪುರುಷೋತ್ತಮ, ಅವನ ಮಾತು ಕೇಳಿದಿದ್ದರಿಂದಲೇ ನಾಯಕ ಹಾಳದನೆಂಬಂತೆ ಎರಕ ಹೊಯ್ದಿರುವುದು ಅವರ ಜಾತಿ ಪ್ರೇಮದ ಪರಾಕಾಷ್ಠೆ ಎಂದಾಡಿಕೊಳ್ಳುವಂತಾಯಿತು. ಅದೇನೇ ಇರಲಿ, ಕೃತಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಲಭ್ಯವಾಯಿತು. ವಿಷಾದವೇನೆಂದರೆ, ಆ ಸಂತೋಷವನ್ನು ಅನುಭವಿಸಲು ತ.ರಾ.ಸು. ಅವರೇ ಇರಲಿಲ್ಲ (ನಿಧನ: 10–04–1984).

★★★

ಇದೆಲ್ಲಾ ಇರಲಿ. ಕೃತಿಯಲ್ಲಿ ಒಂದೊಂದು ಪಾತ್ರವನ್ನು ಅವರು ಕಟೆದು ನಿಲ್ಲಿಸಿರುವ ಪರಿ ಅನನ್ಯ. ಮದಕರಿಯ ಅಜ್ಜಿ ರಾಣಿ ಗಂಡೋಬಳವ್ವನ ಧೀರ ಗಂಭೀರತೆ. ಹೈದರಾಲಿಯ ನಯ ವಂಚಕತನ, ಸುತ್ತಮುತ್ತಲ ಪಾಳೆಗಾರರಲ್ಲಿನ ಅಸೂಯೆ, ಸ್ವಜಾತಿ ಮಾತ್ಸರ್ಯ, ದುರ್ಗದ ಏಳಿಗೆಯ ಕಂಡು ಒಳಗೇ ಕನಲುವ ಮರಾಠರ ಹಗೆ, ಕಳ್ಳಿನರಸಪ್ಪನ ಸ್ವಾಮಿನಿಷ್ಠೆ ಇವೆಲ್ಲವನ್ನು ಚೇತೋಹಾರಿಯಾಗಿ ತೆರೆದಿಟ್ಟಿದ್ದಾರೆ. ಜಾನಕಲ್ಲಿನಲ್ಲಿದ್ದ ತೊದಲು ಭರಮಪ್ಪನ ಮಗ 12 ವರ್ಷದ ಬಾಲಕ ಮದಕರಿಯನ್ನು ಕರೆತಂದು ಪಟ್ಟಕಟ್ಟಿ, ವೀರನನ್ನಾಗಿ ನಾಗತಿ ಬೆಳೆಸುವ ವೈಖರಿಯೇ ಚೆಂದ. ಮದಕರಿಗೆ ಕೈಕಾಲು ಮುಖ ತೊಳೆಯಲು ಚೊಂಬಿನಲ್ಲಿ ರಕ್ತಕೊಡುತ್ತಾಳೆ. ರಕ್ತದ ಬಗ್ಗೆ ಭಯ ಹೋಗಲೆಂದು ಅದನ್ನೇ ಕುಡಿಯಲೂ ಸೂಚಿಸುತ್ತಾಳೆ. ತನ್ನೊಂದಿಗೆ ರಾಯದುರ್ಗಕ್ಕೆ ಯುದ್ಧಕ್ಕೂ ಕರೆದೊಯ್ಯುತ್ತಾಳೆ. ಕಾಲಗರ್ಭದಲ್ಲಿ ಹುದುಗಿ ಹೋದ ಚರಿತ್ರೆಯನ್ನು ಅದ್ಭುತವಾಗಿ ತ.ರಾ.ಸು. ಮರು ಸೃಷ್ಟಿಸಿದ್ದಾರೆ. ದುರ್ಗದ ದ್ರೋಹಿಗಳನ್ನು ಧ್ವಂಸ ಮಾಡುವ ಮದಕರಿಯ ಪ್ರಚಂಡ ರಣೋತ್ಸಾಹ, ಯುದ್ಧೋನ್ಮಾದವನ್ನು ಪುಟಪುಟದಲ್ಲೂ ರೋಚಕಗೊಳಿಸಿದ್ದಾರೆ. ಅಧ್ಯಾಯಗಳಿಗೂ ಅಷ್ಟೇ ಮೈನವಿರೇಳಿಸುವ ಹೆಸರುಗಳನ್ನಿಡುವ ಮೋಡಿಗಾರ. 'ಗರಿ ಬಿಚ್ಚಿದ ಗರುಡ', 'ಸಿಡಿಲು ಮಿಂಚುಗಳೊಡನೆ ಸರಸ', 'ಸಂಚುಗಳ ಸುಳಿಯಲ್ಲಿ', 'ಸಮರಾಗಮನ', 'ರಕ್ತ ರಂಜಿತ ರವಿ', 'ಕತ್ತಲಾಯಿತು ಮತ್ತೆ ಹಗಲಾಲಿಲ್ಲ' ಇವು ಅವರ ವಿಶಿಷ್ಟ ಹೆಸರಿನ ಅಧ್ಯಾಯಗಳು.

★★★

ಇನ್ನು ತ.ರಾ.ಸು. ಚಿತ್ರರಂಗಕ್ಕೆ ನೀಡಿರುವ ಕೊಡುಗೆ ಕೂಡ ಅನುಪಮ. ಅಷ್ಟೇ ಗಮನಾರ್ಹ–